"ಮಧುರ ಮಕ್ಕಳೇ - ತಮ್ಮ ಉನ್ನತಿಗಾಗಿ ಪುರುಷಾರ್ಥವನ್ನು ಮಾಡುತ್ತಿರಿ, ಜ್ಞಾನ ರತ್ನಗಳನ್ನು ದಾನ ಮಾಡಿ ಸದಾ ತಮ್ಮ ಹಾಗೂ ಅನ್ಯರ ಕಲ್ಯಾಣವನ್ನು ಮಾಡಲು ನಿಮಿತ್ತರಾಗಿ"

ಪ್ರಶ್ನೆ: ಈಶ್ವರೀಯ ಸೇವೆ ಮಾಡಲು ಯಾವ ಗುಣ ಅವಶ್ಯವಾಗಿ ಇರಬೇಕು? ಸೇವೆ ಮಾಡುವ ಮಕ್ಕಳಿಗೆ ಯಾವ ಯೋಚನೆ ಇರಬಾರದು?

ಉತ್ತರ: ಈಶ್ವರೀಯ ಸೇವೆಯಲ್ಲಿ ಬಹಳ ಮಧುರ ಸ್ವಭಾವ ಇರಬೇಕು. ಕ್ರೋಧದಲ್ಲಿ ಬಂದು ಯಾರಿಗಾದರು ಕಣ್ಣು ತೋರಿಸಿದ್ದೇ ಆದರೆ ಅನೇಕರಿಗೆ ನಷ್ಟ ಆಗಿಬಿಡುತ್ತದೆ. ಸೇವಾಧಾರಿ ಮಕ್ಕಳಲ್ಲಿ ಅಹಂಕಾರ ಅಥವಾ ಕ್ರೋಧ ಸ್ವಲ್ಪವೂ ಇರಬಾರದು. ಇದೇ ವಿಕಾರ ಬಹಳ ವಿಘ್ನ ರೂಪವಾಗುತ್ತದೆ. ಮತ್ತೆ ಮಾಯೆ ಪ್ರವೇಶ ಮಾಡಿ ಕೆಲವು ಮಕ್ಕಳನ್ನು ಸಂಶಯ ಬುದ್ಧಿಯವರನ್ನಾಗಿ ಮಾಡಿಬಿಡುತ್ತದೆ. ಈಶ್ವರೀಯ ಸೇವೆ ಮಾಡಲು ಕೆಲಸವನ್ನು ಬಿಟ್ಟು ಸೇವೆ ಮಾಡೋಣ ಎನ್ನುವ ಯೋಚನೆ ಬರಬಾರದು ಒಂದುವೇಳೆ ಕೆಲಸವನ್ನು ಬಿಟ್ಟು ಈ ಸೇವೆಯನ್ನೂ ಮಾಡಲಿಲ್ಲವೆಂದರೆ ಹೊರೆ ಆಗುತ್ತದೆ.

ಗೀತೆ: ಓಂ ನಮೋ ಶಿವಾಯ ನಮಃ.

ಓಂ ಶಾಂತಿ. ಭಕ್ತರು ಓಂ ನಮೋ ಶಿವಾಯ ನಮಃ ಎಂದು ಹೇಳಿದಾಗ ಶಿವಲಿಂಗ ಅಥವಾ ಶಿವನ ಮಂದಿರವನ್ನು ನೆನಪು ಮಾಡುತ್ತಾರೆ. ನಮಃ ಎಂದು ಹೇಳಿ ಪೂಜೆ ಮಾಡುತ್ತಾರೆ. ಅದು ಭಕ್ತಿಯಾಗಿದೆ. ನೀವಂತೂ ನೀವೇ ಮಾತಾ-ಪಿತಾ..ಎಂದು ಶಿವತಂದೆಗೆ ಹೇಳುತ್ತೀರಿ, ಚಿತ್ರಗಳಿಗೆ ಹೇಳುವುದಿಲ್ಲ. ನಿಮಗೆ ಗೊತ್ತಿದೆ ನಮ್ಮನ್ನು ಶಿವಬಾಬಾನೇ ಓದಿಸುತ್ತಿದ್ದಾರೆ. ರಾತ್ರಿ-ಹಗಲಿನ ಅಂತರವಿದೆ. ಇದು ಪ್ರಪಂಚದವರಿಗೆ ಗೊತ್ತಿಲ್ಲ. ಶಿವಬಾಬಾ ನಿರಾಕಾರ ಬಂದು ಪಾಠಶಾಲೆಯಲ್ಲಿ ಓದಿಸುತ್ತಾರೆ. ಏನು ಓದಿಸುತ್ತಾರೆ? ಸಹಜ ರಾಜಯೋಗ ಹಾಗೂ ಜ್ಞಾನವನ್ನು ಓದಿಸುತ್ತಾರೆ. ಹೇಗೆ ಕ್ರೈಸ್ತರ ಪುಸ್ತಕವಿದೆ. ಕ್ರಿಶ್ಚಿಯನ್ನರು ಯಾವ ಜ್ಞಾನ ಕೊಟ್ಟರೋ ಅದನ್ನು ಬೈಬಲ್ ಪುಸ್ತಕ ರೂಪದಲ್ಲಿ ಮಾಡಿದ್ದಾರೆ. ಇಲ್ಲಾದರೆ ಶಿವಪುರಾಣ ಇರುತ್ತದೆ, ಆದರೆ ಆ ಶಿವಪುರಾಣವನ್ನು ಬೇರೆ ಯಾರೊ ಮಾಡಿದ್ದಾರೆ. ವಾಸ್ತವದಲ್ಲಿ ಸತ್ಯ ಶಿವಪುರಾಣ ಗೀತೆಯಾಗಿದೆ. ತಂದೆ ನಿಮಗೆ ತಿಳಿಸಿದ್ದಾರೆ ನೀವು ಅನ್ಯರಿಗೆ ತಿಳಿಸಬೇಕು. ಶಿವತಂದೆ ಏನು ತಿಳಿಸಿದ್ದಾರೆ? ಶಿವನ ಜನ್ಮದ ಬಗ್ಗೆಯೂ ಸಹ ತಿಳಿಸಿದ್ದಾರೆ. ಈಗ ಗೀತೆಗೆ ಶಿವಪುರಾಣ ಎಂದು ಕರೆಯುವುದೋ? ಅಥವಾ ಶಿವಪುರಾಣಕ್ಕೆ ಕರೆಯುವುದೋ? ಎರಡೂ ಅಂತೂ ಆಗಲು ಸಾಧ್ಯವಿಲ್ಲ. ಭಾರತದ ಧರ್ಮಶಾಸ್ತ್ರ ಒಂದೇ ಇರಬೇಕು. ಯಾರು ಧರ್ಮ ಸ್ಥಾಪನೆ ಮಾಡುತ್ತಾರೋ ಅವರ ಜೀವನ ಚರಿತ್ರೆಯನ್ನು ಮಾಡುತ್ತಾರೆ. ಇವರು ಇಂತಿಂತಹದ್ದು ತಿಳಿಸಿದ್ದಾರೆ. ಕ್ರೈಸ್ತನೂ ಸಹ ಜ್ಞಾನ ತಿಳಿಸಿರಬಹುದು ಯಾವುದಕ್ಕೆ ಬೈಬಲ್ ಮಾಡಿದ್ದಾರೆ. ಆ ಪುರಾಣದಲ್ಲಿ ಬಹಳ ಕಥೆಗಳು ಇರುತ್ತದೆ. ಈಗ ಮಕ್ಕಳಿಗೆ ಕಥೆಯನ್ನು ತಿಳಿಸಲಾಗಿದೆ ಆದರೆ ಪಾರ್ವತಿಯ ಹೆಸರನ್ನು ಹಾಕಿಬಿಟ್ಟಿದ್ದಾರೆ. ಪವಿತ್ರತೆಯ ಪ್ರತಿಜ್ಞೆಯನ್ನು ಮಾಡಿಸಿರುವುದು ಅದರಲ್ಲಿ ತೋರಿಸುವುದಿಲ್ಲ. ಮನ್ಮನಾಭವ ಎನ್ನುವ ಶಬ್ದ ಶಿವಪುರಾಣದಲ್ಲಿ ಇರುವುದಿಲ್ಲ. ಶಿವಪುರಾಣ ಬೇರೆಯಾಗಿದೆ, ಇದು ಶ್ರೀಮತ್ಭಗದ್ಗೀತೆಯಾಗಿದೆ. ಭಗವಂತ ಒಬ್ಬರೇ ಆಗಿದ್ದಾರೆ ಎನ್ನುವುದು ಸಿದ್ಧ ಮಾಡಬೇಕು. ಅವರ ಹೆಸರೇ ಶಿವ ಆಗಿದೆ. ಆ ಗೀತೆಯೇ ಪುನಃ ಶಿವಪುರಾಣ ಆಗಿಬಿಡುತ್ತದೆ. ವಾಸ್ತವದಲ್ಲಿ ಕೃಷ್ಣ ಪತಿತಪಾವನ ಅಲ್ಲ. ಶಿವ ಪತಿತಪಾವನ ಆಗಿದ್ದಾರೆ. ಭಾರತದ ಧರ್ಮ ಶಾಸ್ತ್ರ ಗೀತೆಯಾಗಿದೆ. ಶಿವಪುರಾಣವನ್ನು ಎಲ್ಲರೂ ಒಪ್ಪುವುದಿಲ್ಲ. ಈಗ ಗೀತೆಯಿಂದ ದೇವೀ-ದೇವತಾ ಧರ್ಮ ಸ್ಥಾಪನೆಯಾಗಿದೆ ಎಂದು ಹೇಳುತ್ತಾರೆ. ಅದಂತೂ ಶಿವನೇ ಮಾಡಲು ಸಾಧ್ಯವಾಗುತ್ತದೆ. ಕೃಷ್ಣನೂ ಸಹ ಕಪ್ಪಾಗಿ ಇರುವವರು ಬೆಳ್ಳಗಾಗುತ್ತಾರೆ. ಬಹಳ ಅಂತರ ಇದೆ. ಮಕ್ಕಳಿಗೆ ತಿಳಿಸಲಾಗುತ್ತದೆ, ಯಾರು ತಿಳಿದುಕೊಳ್ಳುತ್ತಾರೋ ಅಲೌಕಿಕ ಕಾರ್ಯವನ್ನು ಮಾಡುವುದು ಅವರ ಕರ್ತವ್ಯವಾಗಿದೆ. ಖುಷಿ ಆಗಬೇಕು. ಅಪಾರ ಖಜಾನೆ ಸಿಕ್ಕಿದಾಗ ದಾನ ಮಾಡಬೇಕು. ತಂದೆಯ ಪರಿಚಯ ಬಹಳ ಸಹಜವಾಗಿದೆ. ಭಕ್ತರು ಭಗವಂತನನ್ನು ನೆನಪು ಮಾಡುತ್ತಾರೆ. ಭಗವಂತ ಬಂದು ಫಲ ಕೊಡುತ್ತಾರೆ. ಯಾವ ಫಲ ಕೊಡುತ್ತಾರೆ? ಭಗವಂತ ಜೀವನ್ಮುಕ್ತಿಯನ್ನು ಕೊಡುತ್ತಾರೆ. ಸರ್ವರ ಸದ್ಗತಿದಾತ ಕೃಷ್ಣನಿಗೆ ಹೇಳುವುದಿಲ್ಲ. ಪರಮಪಿತ ಪರಮಾತ್ಮನಿಗೆ ಸದ್ಗತಿದಾತ ಎಂದು ಹೇಳುತ್ತಾರೆ. ಪರಮಾತ್ಮ ನಿರಾಕಾರನಾಗಿದ್ದಾರೆ ಎನ್ನುವುದು ನಿಮಗೆ ಗೊತ್ತಿದೆ. ಕೃಷ್ಣನಿಗೆ ಪರಮಾತ್ಮ ಎಂದು ಹೇಳಲು ಸಾಧ್ಯವಿಲ್ಲ. ಕೃಷ್ಣ ಎಲ್ಲಾ ಆತ್ಮರ ತಂದೆ ಆಗಲು ಸಾಧ್ಯವಿಲ್ಲ. ಸರ್ವ ಆತ್ಮರ ತಂದೆ ಎಂದು ಪರಮಪಿತ ಪರಮಾತ್ಮನಿಗೇ ಗಾಯನವಿದೆ. ಮಕ್ಕಳು ಚೆನ್ನಾಗಿ ತಂದೆಯ ಪರಿಚಯವನ್ನು ಕೊಡಬೇಕು. ಅವರು ಸರ್ವವ್ಯಾಪಿ ಅಥವಾ ಲಿಂಗ ಎಂದು ಹೇಳುತ್ತಾರೆ. ಭಲೆ ಲಿಂಗದ ವೃತ್ತಿ ಏನಿರಬಹುದು? ಪತಿತಪಾವನ, ಜ್ಞಾನಸಾಗರ ಎಂದು ಪರಮಪಿತ ಪರಮಾತ್ಮನ ಮಹಿಮೆಯಾಗಿದೆ. ಈ ಪೋಸ್ಟರ್ನ್ನು ಹೊರಗೆ ಹಾಕಬೇಕಾಗುತ್ತದೆ. ಯಾರಾದರೂ ಬಂದರೆ ಓದಲಿ. ನೀವು ಹೋಗಿ ಲಕ್ಷ್ಮೀ-ನಾರಾಯಣ ಅಥವಾ ರಾಧಾ-ಕೃಷ್ಣನ ಮಂದಿರಕ್ಕೆ ಹೋಗಿ ತಿಳಿಸಿ. ನಮ್ಮ ಲಕ್ಷ್ಮೀ-ನಾರಾಯಣರ ಚಿತ್ರ ಬಹಳ ಚೆನ್ನಾಗಿದೆ, ಇದರ ಮೇಲೆ ತಿಳಿಸಬೇಕು. ಲಕ್ಷ್ಮೀ-ನಾರಾಯಣರ ಮಂದಿರದವರು ಮುಖ್ಯವಾಗಿ ಗೀತೆಯನ್ನು ಅವಶ್ಯವಾಗಿ ಓದುತ್ತಾರೆ. ತಮ್ಮ ಉನ್ನತಿಗಾಗಿ ಪುರುಷಾರ್ಥವನ್ನು ಮಾಡಬೇಕು. ತಂದೆಯಿಂದ ಶ್ರೇಷ್ಠ ಆಸ್ತಿಯನ್ನು ಪಡೆಯುವ

ಆಸಕ್ತಿ ಇರಬೇಕು. ತಮ್ಮ ಹಾಗೂ ಅನ್ಯರ ಕಲ್ಯಾಣವನ್ನು ಮಾಡಬೇಕು. ಶಿವತಂದೆಯಂತೂ ಎಲ್ಲರ ಕಲ್ಯಾಣ ಮಾಡುವವರಾಗಿದ್ದಾರೆ. ತಾವೂ ಸಹ ಕಲ್ಯಾಣಕಾರಿ ಆಗಬೇಕಾಗಿದೆ. ನನ್ನ ಅಕಲ್ಯಾಣ ಎಂದೂ ಆಗುವುದಿಲ್ಲ ಎಂದು ತಂದೆ ಹೇಳುತ್ತಾರೆ.ಅಕಲ್ಯಾಣಕಾರಿ ರಾವಣ ಆಗಿದ್ದಾನೆ, ಇದು ಮನುಷ್ಯರಿಗೆ ಗೊತ್ತಿಲ್ಲ. ತಾವು ಹೋಗಿ ತಿಳಿಸಬೇಕು. ಮೋಡವನ್ನು ತುಂಬಿಸುಕೊಂಡಿ ಹೋಗಿ ಸುರಿಸಬೇಕು. ಎಷ್ಟು ಆಸಕ್ತಿ ಇರಬೇಕು. ಒಂದುವೇಳೆ ದಾನ ಮಾಡಲಿಲ್ಲವೆಂದರೆ ಅವಶ್ಯವಾಗಿ ತಮ್ಮ ಕಲ್ಯಾಣವನ್ನು ಮಾಡಿಕೊಂಡಿಲ್ಲ ಎಂದರ್ಥ, ಆಗ ಅನ್ಯರಿಗೆ ಕಲ್ಯಾಣ ಮಾಡಲು ಸಾಧ್ಯವಿಲ್ಲ. ಸೇವಾಕೇಂದ್ರಗಳಲ್ಲಿ ಬಹಳ ಒಳ್ಳೆಯವರು ಬರುತ್ತಾರೆ. ಆದರೆ ಅನ್ಯರಿಗೆ ಕಲ್ಯಾಣ ಮಾಡುವುದೇನಿದೆ ಅದನ್ನು ಅವರು ಮಾಡುವುದಿಲ್ಲ. ಕೇಳುತ್ತಾರೆ ನಂತರ ವ್ಯಾಪಾರದಲ್ಲಿ ಸುಸ್ತಾಗಿ ಮನೆಗೆ ಹೋಗುತ್ತಾರೆಂದರೆ ಸಮಾಪ್ತಿಯಾಗಿಬಿಡುತ್ತದೆ. ದಾನವನ್ನು ಮಾಡಲಿಲ್ಲವೆಂದರೆ ಅವರು ಬ್ರಾಹ್ಮಣರು ಅಲ್ಲವೇ ಅಲ್ಲ. ನಾವು ದೇವತೆ ಆಗಬೇಕೆಂದು ಬ್ರಾಹ್ಮಣರಿಗೆ ಗೊತ್ತಿದೆ. ಪ್ರತಿಯೊಬ್ಬರು ತಮ್ಮ ಹೃದಯದೊಂದಿಗೆ ಮಾತನಾಡಿಕೊಳ್ಳಬೇಕು. ಒಂದುವೇಳೆ ಯಾರನ್ನಾದರೂ ದೇವತೆಯನ್ನಾಗಿ ಮಾಡಲಿಲ್ಲವೆಂದರೆ ಹೇಗೆ ಬ್ರಾಹ್ಮಣರಾಗುವುದು? ನಾನು ಕಲ್ಯಾಣಕಾರಿ ಆಗಿಯೇ ಇದ್ದೇನೆ ಎಂದು ಶಿವಬಾಬಾ ಹೇಳುತ್ತಾರೆ. ಭಲೆ ಯಾರಿಗೆ ಧಾರಣೆ ಆಗುವುದಿಲ್ಲವೋ ಅವರಿಗಾಗಿ ಸ್ಥೂಲ ಸೇವೆ ಇದೆ. ಯಾರಿಗೆ ಸೇವೆ ಮಾಡಿದ್ದೇವೆಯೋ ಅಂತಹ ಮಕ್ಕಳು ಇಲ್ಲಿಗೆ ಬರುತ್ತಾರೆ. ಸೇವಾಕೇಂದ್ರಗಳಲ್ಲಿ ಮಕ್ಕಳು ನಾನು ಎಷ್ಟು ಜನರಿಗೆ ಕಲ್ಯಾಣ ಮಾಡಿದ್ದೇನೆ? ಎಂದು ತಮ್ಮೊಂದಿಗೆ ತಾವೇ ಕೇಳಿಕೊಳ್ಳಬೇಕು. ಬಹಳ ಜನ ಅಂತೂ ಬರುತ್ತಾರೆ. ಸ್ವಲ್ಪ ಜನ ಅಷ್ಟೇ ಸೇವೆ ಮಾಡುತ್ತಾರೆ. ಬಾಕಿ ವ್ಯಾಪಾರ-ವ್ಯವಹಾರದಲ್ಲಿ ತತ್ಪರರಾಗಿರುತ್ತಾರೆ. ಕೇವಲ ಪವಿತ್ರರಾಗಬೇಕೆಂದು ತಿಳಿದಿರುತ್ತಾರೆ. ಆದರೆ ಧನವನ್ನು ದಾನವೂ ಸಹ ಮಾಡಬೇಕು. ಒಂದುವೇಳೆ ಯಾರ ಕಲ್ಯಾಣವನ್ನು ಮಾಡಲಿಲ್ಲವೆಂದರೆ ನಾನು ಯಾವ ಪದವಿಯನ್ನು ಪಡೆದುಕೊಳ್ಳುತ್ತೇನೆ? ಎಂದು ತಮ್ಮೊಂದಿಗೆ ತಾವೇ ಕೇಳಿಕೊಳ್ಳಬೇಕು. ಅಕ್ಕಂದಿರು ಬಹಳ ಜನರ ಕಲ್ಯಾಣವನ್ನು ಮಾಡಿ ಮಾರ್ಗದರ್ಶಕರಾಗಿ ಬರುತ್ತಾರೆ. ಅವರಲ್ಲೂ ಸಹ ನಂಬರ್ವಾರಾಗಿ ಇರುತ್ತಾರೆ. ಕೆಲವರನ್ನು ಫಸ್ಟ್ ಕ್ಲಾಸ್, ಕೆಲವರನ್ನು ಸೆಕೆಂಡ್ ಕ್ಲಾಸ್ ಕೆಲವರನ್ನು ತರ್ಡ್ ಕ್ಲಾಸಿನಲ್ಲಿ ಇಡಲಾಗುತ್ತದೆ. ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಬೇಕಾಗಿದೆ. ಯಾರು ತಮ್ಮ ಕಲ್ಯಾಣವನ್ನು ಮಾಡಿಕೊಂಡಿಲ್ಲ ಅಂತಹವರು ಯಾವ ಪದವಿಯನ್ನು ಪಡೆದುಕೊಳ್ಳುತ್ತಾರೆ! ಬಹಳ ಅಂತಹ ಸೇವಾಕೇಂದ್ರಗಳೂ ಇದೆ ಯಾವುದರಲ್ಲಿ ಮಕ್ಕಳು ಸೇವೆಯೇ ಮಾಡುವುದಿಲ್ಲ. ಹೋಗಿ ದಾನ ಮಾಡುವ ಶಕ್ತಿ ಇಲ್ಲ. ಬೆಳಗ್ಗೆ ಮಂದಿರಗಳಲ್ಲಿ ಬಹಳ ಜನ ಬರುತ್ತಾರೆ ಹೋಗಿ ದೇವತಾಧರ್ಮದವರು ಯಾರು ಎಂದು ಹುಡುಕಬೇಕು.

ಈಗ ತಂದೆ ನಾನು ಈ ತನುವಿನಲ್ಲಿ (ಬ್ರಹ್ಮಾರವರಲ್ಲಿ) ಬಂದಿದ್ದೇನೆಂದು ತಿಳಿಸುತ್ತಾರೆ. ಹೋಗಿ ಚಿಕ್ಕ ಶರೀರದಲ್ಲಿ ಆತ್ಮ ಪ್ರವೇಶ ಮಾಡುತ್ತದೆ. ಪ್ರೇತಾತ್ಮ (ಗೋಸ್ಟ್) ನೆರಳಿನ ರೂಪದಲ್ಲಿ ಬರುತ್ತದೆ. ಇದೂ ಸಹ ವಿಚಿತ್ರವಾಗಿದೆ. ಹೇಗೆ ಓಡಾಡುತ್ತಾ ಇರುತ್ತದೆ ಎಂದು ಯಾರಿಗೆ ಗೊತ್ತಾಗುವುದು! ಡ್ರಾಮಾನುಸಾರವಾಗಿ ಆತ್ಮಕ್ಕೆ ಶರೀರ ಸಿಗದೆ ಇರುವ ಕಾರಣ ಅಲೆಯುತ್ತಿರುತ್ತದೆ. ನೆರಳಿನ ರೂಪವನ್ನು ಧರಿಸುತ್ತದೆ. ಗೋಸ್ಟಿನ ನೆರಳು ಇರುವುದಿಲ್ಲ. ಬಂದು ಮಾಯಾ ಆಗಿಬಿಡುತ್ತದೆ. ಈ ವಿಷಯದಲ್ಲಿ ನಾವು ಹೋಗಬಾರದು. ಅವಶ್ಯಕತೆಯೇ ಇಲ್ಲ. ಇದರಲ್ಲಿ ಹೋದರೆ ಶಿವತಂದೆಯನ್ನೂ ಸಹ ಮರೆತುಹೋಗುತ್ತೀರಿ. ನಿರಾಕಾರನನ್ನು ನೆನಪು ಮಾಡಿ ಎಂದು ತಂದೆಯ ಆಜ್ಞೆ ಯಾಗಿದೆ. ತಮ್ಮ ಹಾಗೂ ಅನ್ಯರ ದೇಹವನ್ನು ಮರೆಯಬೇಕು. ಶಿವಬಾಬಾ ಎಲ್ಲರಿಗೂ ಪ್ರಿಯವಾಗಿದ್ದಾರೆ. ಯಾವುದೇ ಮಾತಿನಲ್ಲಿ ಹೋಗದೆ ತಂದೆಯನ್ನು ನೆನಪು ಮಾಡಿ. ಇದು ನೆನಪಿನ ಯಾತ್ರೆಯಾಗಿದೆ. ಮನ್ಮನಾಭವದ ಅರ್ಥವೂ ಸಹ ಇದೆ ಆಗಿದೆ. ಕೃಷ್ಣ ಆ ರೀತಿ ಹೇಳಲು ಸಾಧ್ಯವಿಲ್ಲ. ಕೃಷ್ಣ ಮಾರ್ಗದರ್ಶಕನಾಗಲು ಸಾಧ್ಯವಿಲ್ಲ. ನಿರಾಕರ ತಂದೆಯೇ ಮಾರ್ಗದರ್ಶಕನಾಗಿ ಆತ್ಮರೆಲ್ಲರನ್ನು ಸೊಳ್ಳೆಯ ಗುಂಪಿನ ಹಾಗೆ ಕರೆದುಕೊಂಡು ಹೋಗುತ್ತಾರೆ. ಆತ್ಮರ ಮಾರ್ಗದರ್ಶಕ ಕೃಷ್ಣ ಆಗಲು ಸಾಧ್ಯವಿಲ್ಲ. ಅವರು ಪುನರ್ಜನ್ಮದಲ್ಲಿ ಹೋಗಬೇಕು, ಅಂದಾಗ ಎಲ್ಲರಿಗೂ ತಂದೆಯ ಪರಿಚಯವನ್ನು ಕೊಡಬೇಕು. ಭಕ್ತರ ಭಗವಂತ ಒಬ್ಬರೇ ಆಗಿದ್ದಾರೆ. ನನ್ನೊಬ್ಬನನ್ನೇ ನೆನಪು ಮಾಡಿದರೆ ವಿಕರ್ಮಗಳು ವಿನಾಶ ಆಗುತ್ತದೆ ಎಂದು ತಂದೆ ತಿಳಿಸುತ್ತಾರೆ. ಮಕ್ಕಳಿಗೆ ಸರ್ವೀಸಿನ ಆಸಕ್ತಿ ಇರಬೇಕು.

ಮುರಳಿ ಕೇಳಲು ಮಕ್ಕಳು ಮಧುಬನಕ್ಕೆ ಬರುತ್ತಾರೆಂದರೆ ತಿಳಿಸುವವರು ಇರಬೇಕಲ್ಲವೇ. ಬಾಬಾ ಎಲ್ಲಿಗಾದರೂ ಹೋಗುತ್ತಾರೆಂದರೆ ಸೇವೆಯನ್ನು ಮಾಡುತ್ತಾರೆ. ಸರ್ವೀಸಿನ ಆಸಕ್ತಿ ಇರುತ್ತದೆ. ಮಕ್ಕಳು ನೆನಪು ಮಾಡುತ್ತಾರೆ. ಅವರು ಸನ್ಮುಖದಲ್ಲಿ ಮುರಳಿಯನ್ನು ಕೇಳಿ ಖುಷಿ ಆಗುತ್ತಾರೆ. ಒಂದೇ ಸಭೆಯಲ್ಲಿ 10 ಕಾರ್ಯಗಳು ಸಿದ್ಧ ಆಗುತ್ತದೆ. ದೊಡ್ಡ-ದೊಡ್ಡ ಸಭೆಗಳಿಗೆ ತಂದೆ ಹೋಗಬೇಕಾಗಿಲ್ಲ. ಅದು ಮಕ್ಕಳ ಕೆಲಸವಾಗಿದೆ. ಮಕ್ಕಳು ಪ್ರಶ್ನೆಗಳಿಗೆ ಉತ್ತರ ಕೊಡುತ್ತಾರೆ. ಸನ್ಯಾಸಿಗಳಂತೂ ತಂದೆಯ ಮುಂದೆ ಬರುವುದೇ ಇಲ್ಲ. ಅವರಿಗಾದರೆ ಮಾನ್ಯತೆ ಬೇಕಲ್ಲವೇ. ತಂದೆಯ ಪಾರ್ಟ್ ವಿಚಿತ್ರವಾಗಿದೆ. ಯಾವುದು ಕಳೆದುಹೋಯಿತು ಅದು ಡ್ರಾಮಾ ಆಗಿದೆ. ಮುಂದೆ ಹೋದಂತೆ ಮಿಲನ ಮಾಡಲು ಬಹಳ ಮಕ್ಕಳು ಬರುತ್ತಾರೆ. ಮೊದಲು ಮಕ್ಕಳಿಗೆ ತಿಳಿಸಬೇಕಾಗುತ್ತದೆ. ಗೋಪ-ಗೋಪಿಯರೇ ಮನೆ-ಮನೆಗೆ ಹೋಗಿ ಪರಿಚಯವನ್ನು ಕೊಡಬೇಕು. ನಮಗೆ ಗೊತ್ತೇ ಇಲ್ಲ ಎಂದು ಯಾರೂ ದೂರಬಾರದು. ಸಂದೇಶವನ್ನು ಕಳುಹಿಸಲು ರಾಜಾ-ರಾಣಿ ಯಾರೂ ಇಲ್ಲ. ಹೊಸ ಯೋಜನೆಯನ್ನು ಮಾಡಿದಾಗ ಸರ್ಕಾರಕ್ಕೆ ತೋರಿಸಿ ವೃದ್ಧಿ ಮಾಡಿಸುತ್ತಾರೆ. ಇಲ್ಲಾದರೆ ಪ್ರಜೆಗಳು ಪ್ರಜೆಗಳ ಮೇಲೆ ರಾಜ್ಯ ಮಾಡುತ್ತಾರೆ. ಮಕ್ಕಳಿಗೆ ನಿಮಂತ್ರಣ ಕೊಡಬೇಕಾಗಿದೆ. ಇದಕ್ಕೆ ಚಿತ್ರಗಳನ್ನು ಮುದ್ರಿಸುತ್ತಾರೆ. ಈ ಚಿತ್ರಗಳು ಹೊರಗಡೆ ಹೋಗುತ್ತದೆ. ಮಕ್ಕಳು ಪರಿಶ್ರಮ ಪಡಬೇಕು. ಯಾರು ಭಾಷಣ ಮಾಡುತ್ತಾರೆ ಅವರು ಹೋಗಿ ಅವರ ಭಾಷೆಯಲ್ಲಿ ತಿಳಿಸಬೇಕು.

ಅನೇಕ ಭಾಷೆಗಳಿದೆ. ಪೂನ ಹಾಗೂ ಬೆಂಗಳೂರಿನ ಕಡೆ ಹೆಚ್ಚು ಸೇವೆಯನ್ನು ವೃದ್ಧಿ ಮಾಡಿ ಎಂದು ತಂದೆ ಸಲಹೆ ಕೊಡುತ್ತಿದ್ದಾರೆ. ಎಲ್ಲರಿಗೂ ಗೊತ್ತಾಗಲಿ, ಎಲ್ಲಾ ಭಾಷೆಗಳಲ್ಲಿ ಪಾಂಪ್ಲೆಟ್ ಮುದ್ರಿಸಿ. ಬೇಹದ್ದಿನ ಬುದ್ಧಿ ಬೇಕಾಗುತ್ತದೆ. ಬಾಬಾ ಸೇವೆಗಾಗಿ ಕೆಲಸವನ್ನು ಬಿಡುವುದೇನು-ಈ ರೀತಿ ಮಾಡಬಾರದು. ಕೆಲಸವನ್ನು ಬಿಟ್ಟ ನಂತರ ಸೇವೆ ಮಾಡಲಿಲ್ಲವೆಂದರೆ ಹೊರೆಯಾಗುತ್ತದೆ. ಸೇವೆಯಲ್ಲಿ ಬಹಳ ಮಧುರ ಸ್ವಭಾವ ಇರಬೇಕು. (ಕೋಪದಲ್ಲಿ) ಕಣ್ಣು ತೋರಿಸಿಬಿಡುತ್ತಾರೆ ಮತ್ತೆ ತಂದೆಯ ಹತ್ತಿರ ರಿಪೋರ್ಟ್ ಬರುತ್ತದೆ. ನಮ್ಮದು ಕೇಳುವುದೇ ಇಲ್ಲ ಎಂದು ಒಳ್ಳೊಳ್ಳೆಯ ಮಕ್ಕಳು ಬರೆಯುತ್ತಾರೆ. ಈ ಶಬ್ದಗಳು ಬರಬಾರದು. ಮಕ್ಕಳಲ್ಲಿ ದೇಹದ ಅಹಂಕಾರ ಅಥವಾ ಕ್ರೋಧ ಇದ್ದಿದ್ದೇ ಆದರೆ ಬಹಳ ಜನರಿಗೆ ನಷ್ಟ ಮಾಡುತ್ತಾರೆ. ತಂದೆಗೆ ಮಕ್ಕಳ ಯೋಚನೆ ಇರುತ್ತದೆ. ಎಲ್ಲಾ ಮಕ್ಕಳ ಮೇಲೆ ದೃಷ್ಟಿ ಇಡಬೇಕಾಗುತ್ತದೆ. ಮಮ್ಮಾ ಮಗಳಾಗಿದ್ದಾರೆ ಆದರೂ ಮಾತಾ ಎಂದು ಕರೆಯಲಾಗುತ್ತಿತ್ತು, ಜ್ಞಾನದಲ್ಲೂ ಎಲ್ಲಿ ಮಾಯೆ ಪ್ರವೇಶ ಮಾಡುತ್ತದೆಯೋ ಎಂದು ಅವರಿಗೆ ಚಿಂತೆ ಇರುತ್ತಿತ್ತು. ಮತ್ತೆ ಕೆಲವರು ಸಂಶಯಬುದ್ಧಿಯವರಾಗುತ್ತಾರೆ. ಹೆಜ್ಜೆ-ಹೆಜ್ಜೆಗೂ ವಿಘ್ನ ಬರುತ್ತದೆ. ಇಂದು ಮಗು ಆಗಿರುತ್ತಾರೆ ನಾಳೆ ಪರಿವರ್ತನೆ ಆಗಿಬಿಡುತ್ತಾರೆ. ವಿಕಾರಕ್ಕೆ ಎಷ್ಟು ಜಗಳವಾಗುತ್ತದೆ. ಈ ಸಂಸ್ಥೆಯನ್ನು ಏಕೆ ನಿಂದನೆ ಮಾಡುತ್ತಾರೆ ಎಂದು ಬಹಳ ಜನ ಕೇಳುತ್ತಾರೆ. ತಿಳಿದುಕೊಂಡಿಲ್ಲ ಅಲ್ಲವೇ-ಶಾಸ್ತ್ರದಲ್ಲಿ ಎಷ್ಟು ಕೃಷ್ಣನ ನಿಂದನೆ ಮಾಡಿದ್ದಾರೆ. ಇಂತಹವರನ್ನು ಓಡಿಸಿದ್ದಾರೆ, ಈ ರೀತಿ ಮಾಡಿದ್ದಾರೆ ಎಂದು ಬರೆದಿದ್ದಾರೆ. ಕೃಷ್ಣನಂತೂ ಆ ರೀತಿ ಇರಲು ಸಾಧ್ಯವಿಲ್ಲ. ಇಲ್ಲೂ ಸಹ ಓಡಿಸುವ ಕಳಂಕವನ್ನು ಹಾಕುತ್ತಾರೆ. ಮನೆ-ಮಠವನ್ನು ಬಿಡಿಸುತ್ತಾರೆ. ಏಕೆ ಬಿಡಿಸುತ್ತಾರೆ. ಎಲ್ಲಿಯವರೆವಿಗೂ ತಿಳಿಸುವುದಿಲ್ಲವೋ ಏಕೆ ವಿಘ್ನ ಬರುತ್ತದೆ ಎಂದು ಯಾರಿಗೂ ಗೊತ್ತಾಗುವುದಿಲ್ಲ. ಕಾಮ ವಿಕಾರ ಮುಖ್ಯವಾಗಿದೆ, ಯಾವುದರ ಮೇಲೆ ತಾವು ಮಕ್ಕಳು ವಿಜಯವನ್ನು ಪಡೆದುಕೊಳ್ಳುತ್ತೀರಿ.

ಇವರು ವಿಚಿತ್ರ ತಂದೆ ಆಗಿದ್ದಾರೆ. ಬ್ರಹ್ಮನ ಮೂಲಕ ಬ್ರಾಹ್ಮಣರನ್ನು ರಚನೆ ಮಾಡುತ್ತಾರೆ. ಮೊಟ್ಟಮೊದಲು ಶಿವತಂದೆಯ ಪರಿಚಯವನ್ನು ಕೊಡಬೇಕಾಗಿದೆ. ಅವರಿಂದ ಆಸ್ತಿ ಸಿಗುತ್ತದೆ. ಅದೃಷ್ಟದಲ್ಲಿ ಇಲ್ಲ ಎಂದರೆ ಮರೆತುಹೋಗುತ್ತದೆ, ಎಷ್ಟು ಮಾಯೆಯ ವಿಘ್ನಗಳು ಬರುತ್ತದೆ. ಧಾರಣೆ ಆಗುವುದಿಲ್ಲ. ಇದೂ ವಿಘ್ನ ಆಗಿದೆಯಲ್ಲವೇ, ಏಕೆ ಇಷ್ಟು ಸಹಜ ಸೇವೆ ಮಾಡುವುದಿಲ್ಲ. ಭಗವಂತ ತಂದೆಯಂತೂ ಅವರಾಗಿದ್ದಾರೆ. ಆ ತಂದೆಯನ್ನು ನೆನಪು ಮಾಡಿ. ಭಗವಾನುವಾಚ, ನನ್ನೊಬ್ಬನನ್ನೇ ನೆನಪು ಮಾಡಿದ್ದೇ ಆದರೆ ನನ್ನಿಂದ ಆಸ್ತಿ ಸಿಗುತ್ತದೆ. ಓ ಗಾಡ್ ಫಾದರ್ ಎಂದು ಭಕ್ತರು ಹೇಳುತ್ತಾರಲ್ಲವೇ. ಅಂದಾಗ ತಂದೆಯಿಂದ ಆಸ್ತಿ ಸಿಗುತ್ತಿದೆ. ಸ್ವಲ್ಪ ಸೇವೆಯ ಆಸಕ್ತಿ ಇರಬೇಕು. ಇಲ್ಲವೆಂದರೆ ಉನ್ನತ ಪದವಿ ಸಿಗಲು ಸಾಧ್ಯವಿಲ್ಲ. ಸೇವೆಯಂತೂ ಬಹಳಷ್ಟು ಇದೆ. ಬಹಳ ದುಃಖವಿದೆ. ತಂದೆಯ ಪರಿಚಯ ಹಾಗೂ ಜ್ಞಾನ ಇಲ್ಲವೇ ಇಲ್ಲ. ಆದ್ದರಿಂದ ಪರಿಚಯವನ್ನು ಕೊಡಬೇಕು. ನಮಗೆ ತಂದೆಯ ಆದೇಶ ಸಿಕ್ಕಿದೆ. ನಿಮಂತ್ರಣವನ್ನು ಕೊಡಬೇಕು. ಇದರಲ್ಲಿ ಕ್ರೋಧ ಮಾಡಿಕೊಳ್ಳಬಾರದು. ಪೋಸ್ಟರನ್ನು ಸೇವೆಗಾಗಿ ಮುದ್ರಿಸಲಾಗಿದೆ, ಇಟ್ಟುಕೊಳ್ಳುವುದಕ್ಕೋಸ್ಕರ ಮುದ್ರಿಸಿಲ್ಲ. ಶಿವಾಯ ನಮಃ ಎನ್ನುವ ಶಬ್ದ ಬಹಳ ಚೆನ್ನಾಗಿದೆ. ಪೂರ್ತಿ ಶಿವತಂದೆಯ ಪರಿಚಯವನ್ನು ಕೊಡಬೇಕು. ನಿರಾಕಾರ ಶಿವತಂದೆ ಬಂದಿದ್ದಾರೆ, ಅವಶ್ಯವಾಗಿ ಆಸ್ತಿಯನ್ನು ಕೊಡುತ್ತಾರೆ. ಬಂದು ಪತಿತ ಪ್ರಪಂಚವನ್ನು ಪಾವನವನ್ನಾಗಿ ಮಾಡುತ್ತಾರೆ. ಈ ರೀತಿ ಯೋಚನೆ ಮಾಡಿ ನಂತರ ಹೋಗಿ ಯಾರಿಗಾದರೂ ತಿಳಿಸಬೇಕಾಗುತ್ತದೆ. ಶಿವನ ಮಂದಿರಗಳೂ ಬಹಳಷ್ಟು ಇದೆ, ಗುಪ್ತವೇಷದಲ್ಲಿ ಹೋಗಿ ತಿಳಿಸಬೇಕು. ಈ ಶಿವ ಯಾರು? ಶಿವತಂದೆಗೆ ನಿರಾಕಾರ ಪರಮಾತ್ಮ ಎಂದು ಕರೆಯಲಾಗುತ್ತದೆ. ಇಷ್ಟು ದೊಡ್ಡ ಮಂದಿರಗಳನ್ನು ಮಾಡಲು ಅವರು ಏನು ಮಾಡಿದ್ದಾರೆ. ಯುಕ್ತಿಯಿಂದ ಹೋಗಿ ತಿಳಿಸಬೇಕು. ಈಗ ತಿಳಿದುಕೊಳ್ಳಲಿ ಅಥವಾ ತಿಳಿಯದೇ ಇರಲಿ, ಅಂತ್ಯದಲ್ಲಿ ಯಾರೋ ನಮಗೆ ತಿಳಿಸಿದ್ದರು ಎಂದು ಬರುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಲು ಸೇವೆಯಲ್ಲಿ ಬಹಳ-ಬಹಳ ಆಸಕ್ತಿ ಇರಬೇಕು. ಸುಸ್ತಾಗಿ ಕುಳಿತುಕೊಳ್ಳಬಾರದು, ಮನುಷ್ಯರನ್ನು ದೇವತೆಯನ್ನಾಗಿ ಮಾಡುವ ಸೇವೆ ಮಾಡಬೇಕು.

2. ಯಾರಾದರು ದೂರು ಮಾಡುವ ಹಾಗೆ ಅಥವಾ ಮಾತಾ-ಪಿತರು ಚಿಂತಿಸುವಹಾಗೆ ಯಾವುದೇ ಕರ್ಮವನ್ನು ಮಾಡಬಾರದು, ಯಾವುದೇ ಪರಿಸ್ಥಿತಿಯಲ್ಲಿ ವಿಘ್ನ ರೂಪ ಆಗಬಾರದು.

ವರದಾನ: ಮರ್ಯಾದೆಯ ಗೆರೆಯ ಒಳಗೆ ಸದಾ ಛತ್ರಛಾಯೆಯ ಅನುಭೂತಿ ಮಾಡುವಂತಹ ಮಾಯಾಜೀತ್, ವಿಜಯೀ ಭವ

ತಂದೆಯ ನೆನಪೇ ಛತ್ರಛಾಯೆಯಾಗಿದೆ, ಎಷ್ಟು ನೆನಪಿನಲ್ಲಿರುವಿರಿ ಅಷ್ಟು ಜೊತೆಯ ಅನುಭವವಾಗುವುದು. ಛತ್ರಛಾಯೆಯಲ್ಲಿರುವುದು ಎಂದರೆ ಸದಾ ಸುರಕ್ಷಿತವಾಗಿರುವುದು. ಯಾರು ಸಂಕಲ್ಪದಲ್ಲಿಯೂ ಸಹ

ಛತ್ರಛಾಯೆಯಿಂದ ಹೊರಗೆ ಉಳಿಯುತ್ತಾರೆ ಅವರ ಮೇಲೆ ಮಾಯೆಯ ವಾರ್ ಆಗುವುದು. ಛತ್ರಛಾಯೆಯ ಕೆಳಗೆ, ಮರ್ಯಾದೆಯ ಗೆರೆಯ ಒಳಗೆ ಇರುವುದರಿಂದ ಒಳಗೆ ಬರಲು ಯಾರೂ ಸಾಹಸ ಮಾಡುವುದಿಲ್ಲ. ಆದರೆ ಒಂದುವೇಳೆ ಗೆರೆಯಿಂದ ಹೊರಗೆ ಹೋದರೆ ಆಗ ಮಾಯೆ ಬಹಳ ಹುಷಾರಾಗಿರುತ್ತೆ, ಆದ್ದರಿಂದ ಜೊತೆಯ ಅನುಭವದಿಂದ ಮಾಯಾಜೀತ್ ಆಗಿ.

ಸ್ಲೋಗನ್: ಅಶರೀರಿ ಆಗುವ ಅಭ್ಯಾಸವೇ ಸಮಾಪ್ತಿಯ ಸಮಯವನ್ನು ಸಮೀಪ ತರಲು ಆಧಾರವಾಗಿದೆ.